ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 4, Jan-Feb 2022, Pp 39-45.
©*IIMRD*, Mysuru

IIMRD JOURNALS

www.iimrd.com

# ಸಿದ್ಧರಾಮ ಹೊನ್ಕಲ್‌ರವರ ಆಯ್ದ ಕಥೆಗಳಲ್ಲಿ ಪ್ರಭುತ್ವದ ಮನೋಧೋರಣೆ

**ಚಾಂದಸಾಬ**[*]

[*]ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ..

**ಸಾರಾಂಶ: (Abstract)**

*ಪ್ರಸ್ತುತ ಹೈದ್ರಾಬಾದ್ ಕರ್ನಾಟಕದ ಪ್ರಮುಖ ಕಥೆಗಾರರಲ್ಲಿ ಸಿದ್ಧರಾಮ ಹೊನ್ಕಲ್‌ರವರು ಒಬ್ಬರು. ಸೃಜನಶೀಲತೆಯ ಆಯಾಮದಲ್ಲಿರುವ ಇವರ ಕಥೆಗಳು ಹೆಚ್ಚಾಗಿ ಬಡತನ, ಕೋಮುಗಲಭೆ, ಪ್ರಾದೇಶಿಕ ಭಾಷೆ, ಜಮೀನ್ದಾರ ವ್ಯವಸ್ಥೆ, ಸಾಮಾಜಿಕತೆ, ಮನುಷ್ಯನ ಮನಸ್ಸಿನ ತಲ್ಲಣಗಳು, ಸಾವು–ನೋವು ಮೋಸ–ವಂಚನೆ, ಶ್ರೀಮಂತರ ರಾಜಕೀಯ ವಿವಿಧ ಚಹರೆಗಳು, ಶಿಕ್ಷಣ, ಸ್ತ್ರೀ ಸ್ವತಂತ್ರ್ಯ, ದೇವದಾಸಿ ಪದ್ಧತಿ, ಸಂಸ್ಕೃತಿ, ಮೂಢನಂಬಿಕೆ, ಭ್ರಾತೃತ್ವ ಪ್ರೇಮ, ರೈತರ ಸಂಕಷ್ಟಗಳು, ವಾಪಾರೀಕರಣ ಮುಂತಾದ ಅಂಶಗಳು ಇವರ ಕಥೆಗಳಲ್ಲಿ ಬಿಂಬಿತವಾಗಿವೆ. ಇವರು ತಮ್ಮ ಕಥೆಗಳಲ್ಲಿ ಸಮಸ್ಯೆಗಳನ್ನು ಗುರುತಿಸಿ, ಅವುಗಳನ್ನು ಪರ್ಯಾಯವಾಗಿ ಪರಿಹರಿಸಿಕೊಳ್ಳುವ ವಿಧಾನವನ್ನು ಅತ್ಯಂತ ಸೂಕ್ಷ್ಮವಾಗಿ ತಿಳಿಸಿದ್ದಾರೆ.*

**ಮುಖ್ಯಪದಗಳು (Keywords):** ಸಿದ್ಧರಾಮ ಹೊನ್ಕಲ್, ಪ್ರಭುತ್ವ, ಸಂಪ್ರದಾಯ, ಸಾಮಾಜಿಕ ಶೋಷಣೆ.

## ಪೀಠಿಕೆ

ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾಗಿ ಕಥೆಗಳಲ್ಲಿ ಪ್ರಭುತ್ವದ ಹಿಡಿತ, ಅದರ ಯಜಮಾನಿಕೆ ಮತ್ತು ಶೋಷಣೆಯ ನೆಲೆಯನ್ನು ಹೇಗೆ ಸಾಮಾಜಿಕ ಸಮುದಾಯದಲ್ಲಿ ಅಭದ್ರತೆ ತಂದಿದೆ ಹಾಗೂ ಇದಕ್ಕೆ ಉಪಯೋಗವಾಗಿ ಸಮಾಜವು ಹೇಗೆ ಪ್ರತಿಭಟಿಸಿ ಪ್ರತಿರೋಧಾತ್ಮಕವಾಗಿ ನಿಲ್ಲುತ್ತದೆ ಎಂಬುದು ಕಥಾ ಸಾಹಿತ್ಯದ ಮೂಲಕ ತಿಳಿಯುವುದಾಗಿದೆ. ಹೊಸಗನ್ನಡ ಸಾಹಿತ್ಯ ಪ್ರಕಾರವಾದ ಈ ಸಣ್ಣಕಥೆ ಸಮಾಜದಲ್ಲಿ ನಡೆಯುವ ಪಲ್ಲಟಗಳಿಗೆ ಹೈದ್ರಾಬಾದ ಕರ್ನಾಟಕ ಪ್ರದೇಶವು ಪ್ರತಿರೋಧವನ್ನು ತನ್ನ ನೆಲದ ಸ್ವತಂತ್ರತೆ ಬೆಳಸಿಕೊಂಡಿದೆ. ಹನ್ನೆರಡನೇ ಶತಮಾನದಲ್ಲಿ ನಡೆಸಿದ ವಚನ ಚಳುವಳಿಯೇ ಇದಕ್ಕೆ ಸಾಕ್ಷಿ. ರಾಜ್ಯ ಪ್ರಭುತ್ವ, ಪುರೋಹಿತಶಾಹಿ, ನಡೆಸುತ್ತಿರುವ ಅನ್ಯಾಯ, ಶೋಷಣೆ, ಜಾತಿ, ಲಿಂಗ, ಧರ್ಮದ ಹೆಸರಿನಲ್ಲಿ ಆಗುತ್ತಿರುವ ಅನ್ಯಾಯದ ವಿರುದ್ಧ ಬಸವಣ್ಣನವರು ಪ್ರತಿರೋಧ ತೋರಿದರು. ಹಾಗೆಯೇ ಜೇಡರ ದಾಸಿಮಯ್ಯನವರು, ಕಡಕೋಳ ಮಡಿವಾಳಪ್ಪ ಹಾಗೂ ದಾಸರು, ತಮ್ಮ ಮಾತಿನ ಮೂಲಕ ಪ್ರತಿರೋಧವನ್ನು ವ್ಯಕ್ತಪಡಿಸಿದ್ದಾರೆ. ಈ ನಿಟ್ಟಿನಲ್ಲಿ ಸಾಹಿತ್ಯ ಹುಟ್ಟುವುದು ಯಾವಾಗಲು ಪ್ರಭುತ್ವವನ್ನು ವಿರೋಧಿಸಿಯೇ ಹಿಂದೆಯು ಹೀಗೆ ಮುಂದೆಯು ಹೀಗೆ ಎನ್ನುವ ಮಾತು ಅಕ್ಷರಶ ನಿಜ.

*Please cite this article as:* *ಚಾಂದಸಾಬ (2022).* ಸಿದ್ಧರಾಮ ಹೊನ್ಕಲ್‌ರವರ ಆಯ್ದ ಕಥೆಗಳಲ್ಲಿ ಪ್ರಭುತ್ವದ ಮನೋಧೋರಣೆ *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ. 39–45.*

ಹೈದ್ರಾಬಾದ ಕರ್ನಾಟಕದ ಕಥಾಸಾಹಿತ್ಯ ಇದಕ್ಕೆ ಹೊರತಾಗಿಲ್ಲ. ಇಲ್ಲಿಯ ಕಥೆಗಳು ಪ್ರಭುತ್ವದ ವಿರುದ್ಧ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸಿ ಅನ್ಯಾಯ, ಶೋಷಣೆ, ದೌರ್ಜನ್ಯ, ಉಳಿಗಮಾನ್ಯ ವ್ಯವಸ್ಥೆಯೇ ಯಜಮಾನಿಕೀಯ ಸಂಕೋಲೆಯಿಂದ ಬಿಡುಗಡೆ ಬಯಸುವಂತ ಕಥೆಗಳಾಗಿವೆ ಮತ್ತು ಹಳ್ಳಿಯ ಸಮಸ್ತ ಜೀವನ ಬಾಂಧವ್ಯವನ್ನು ವಿವರವಾಗಿ ನಿರೂಪಿಸುತ್ತಾರೆ. ನ್ಯಾಯದ ಕನಸು ಬಿತ್ತುವ ಇಲ್ಲಿನ ಕಥೆಗಳು ಕಂಡುಬರುತ್ತವೆ. ಮುಖ್ಯವಾಗಿ ಈ ಪ್ರದೇಶದ ಕೊರತೆಗಳನ್ನು ನೀಗಿಸುವುದು ಅದು ಸಾಹಿತ್ಯಿಕವಾಗಿ ಇಲ್ಲಿನ ಧ್ವನಿಯನ್ನು ಗುರುತಿಸಿ ಶೋಷಣೆಯನ್ನು ಹೇಗೆ ಪ್ರತಿಭಟಿಸಿದವು ಎಂಬುದು ಪ್ರಭುತ್ವವನ್ನು ಅಥವಾ ಯಜಮಾನಿಕೆಯನ್ನು ಅಲ್ಲಗೆಳೆಯುವ ಸಮುದಾಯವನ್ನು ಕಥಾಜಗತ್ತಿನಲ್ಲಿ ಹೇಗೆ ಪ್ರತಿಕ್ರಿಯೆಯನ್ನು ನೀಡಿದೆ ಎಂಬುದು ಗೌರವತೆಯನ್ನು ಕಟ್ಟುವ ರೀತಿಯಲ್ಲಿ ಕಾಣುವುದಾಗಿದೆ. ಒಟ್ಟಿನಲ್ಲಿ ಒಂದು ಸಮಸಮಾಜವನ್ನು ಕಟ್ಟಲು ಇಲ್ಲಿಯ ಕಥೆಗಾರರು ಕೊಟ್ಟಿರುವ ಕೂಗನ್ನು ವಿಶ್ಲೇಷಣೆಯಲ್ಲಿ ತಿಳಿದುಕೊಳ್ಳುವುದು. ಈ ನಾಡಿನ ಬರಹಗಾರರ ಬೆಲೆಯನ್ನು ಸಾಹಿತ್ಯಿಕ, ಸಾಂಸ್ಕೃತಿಕವಾಗಿ ಅರಿಯುವುದಾಗಿದೆ.

**ಸಾಮಾಜಿಕ ಪ್ರಭುತ್ವದ ಮನೋಧೋರಣೆ**

'ಈ ಭೂಮಿ ಯಾರದು?' ಕಥೆಯಲ್ಲಿ ಸಾಮಾಜಿಕ ಸಮಸ್ಯೆಗಳಿಗೆ ರೈತರು ಸ್ಪಂದಿಸುವ ಬಗೆಯನ್ನು ವಿವರಿಸುತ್ತಾರೆ. ಸಾಲವನ್ನು ತೀರಿಸಲು ಭೂಮಿತಾಯಿಯನ್ನು ಮಾರಲು ನಿಂಗಪ್ಪ ಸಿದ್ಧನಾದಾಗ ರಾಮಣ್ಣ ಅವನನ್ನು ತಡೆದು ಮುಂದೆ ಆಗುವ ಅನಾಹುತವನ್ನು ವಿವರಿಸಿ ಸ್ವತ: ಮೈಮುರಿದು ದುಡಿಯುವಂತೆ ಕಥೆಯು ಮುಂದೆ ಸಾಗುತ್ತದೆ. ಆಂಧ್ರದ ರೆಡ್ಡಿಗಳು ವಕ್ಕಲತನವನ್ನು ವ್ಯಾಪಾರ, ಉದ್ದಿಮೆಯಾದಂತೆ ಕೃಷಿಯಲ್ಲಿ ಹಣವನ್ನು ತೊಡಗಿಸುತ್ತಾರೆ. ಹೀಗಾಗಿ ಹಣದ ಆಸೆಯಿಂದ ರೈತನು ತನ್ನನ್ನು ತಾನು ಮಾರಿಕೊಂಡಂತೆ ಭೂಮಿತಾಯಿಯನ್ನು ಮಾರಲು ಮುಂದಾಗುತ್ತಾನೆ. ತಮ್ಮ ಸ್ವಾರ್ಥಪರತೆಗೆ ಭೂಮಿ ಮಾರುವ ಕೆಟ್ಟ ಸಂಪ್ರದಾಯವನ್ನು ರಾಮಣ್ಣ ವಿರೋಧವನ್ನು ವ್ಯಕ್ತಪಡಿಸಿ ನಿಂಗಣ್ಣನಿಗೆ ಸತ್ಯದ ಅರಿವು ಮೂಡಿಸುತ್ತಾನೆ. ರೊಕ್ಕ ರೂಪಾಯಿ ಇಂದಲ್ಲ ನಾಳೆ ದೊರೆಯುತ್ತದೆ. ಆದರೆ ಕಳೆದು ಹೋದ ಭೂಮಿತಾಯಿ ಎಷ್ಟೋ ಹುಡುಕಿದರು, ಕರೆದರು ಮರಳಿ ಬರಲಾರಳು ಎಂಬ ಸತ್ಯಾಂಶವು ಈ ಕಥೆಯಲ್ಲಿ ಅಡಗಿದೆ.

'ಸಂಘರ್ಷ' ಕಥೆಯಲ್ಲಿ ಮನಸ್ಸಿನ ತಳಮಳವನ್ನು ವಿವರಿಸುತ್ತದೆ. ಹಿಂದಿನ ಕಾಲದ ಜನರ ಸಂಪ್ರದಾಯಗಳ ಮತ್ತು ಇತ್ತೀಚಿನ ಸಂಪ್ರದಾಯಗಳ ನಡುವಿನ ಸಂಘರ್ಷದಿಂದ ಹಿರಿಯರ ಮತ್ತು ಕಿರಿಯರ ಭಾವನೆಗಳಲ್ಲಿ ಏರುಪೇರುಗಳನ್ನು ತೀಕ್ಷ್ಣವಾದ ಪರಿಣಾಮವನ್ನು ಬೀರುತ್ತದೆ. 'ಮತ್ತೆ ಮಳೆ ಹೊಯ್ಯುತ್ತಿದೆ: ಭೂಮಿ ಕರೆಯುತ್ತಿದೆ' ಕಥೆಯಲ್ಲಿ ಹಿಂದೆ ಊರಿನಲ್ಲಿ ಹಿರಿಯರೆಲ್ಲ ದನಕರು–ಎತ್ತು ಹೊಡಕೊಂಡು ಹೊಲಗಳಿಗೆ ಹೋಗಿ ದುಡಿಯುತ್ತಿದ್ದರು. ಹೆಣ್ಮಕ್ಕಳು ಹಿಂದಗಡೆ ಬುತ್ತಿ ತಗೊಂಡು ಹೊಲಕ್ಕೆ ಬರುತ್ತಿದ್ದರು. ಅಲ್ಲೆ ಹುಂಡು ಚೆಂಜಿತನ ಎಲ್ಲರೂ ದುಡಿದು ಚಂಜಿ ಮುಂದ ಮನೆಗೆ ಬರುತ್ತಿದ್ದರು. ಅವಾಗ ಜನರು ಎಷ್ಟೋ ಆರಾಮ ಇದ್ರು ಎಂದು ಕಥೆ ಮುಂದುವರೆದು ಈಗಿನ ಜನರ ದುಡಿಮೆ, ಒಕ್ಕಲುತನ, ಭೂಮಿವಿರುವುದನ್ನು ಕಥೆ ಮಾರ್ಮಿಕವಾಗಿ ನಿರೂಪಿಸುತ್ತದೆ. ನಿರೊದ್ಯೋಗಿಗಳಾಗಿ ಇದ್ದ ಭೂಮಿಯನ್ನು ಬೇರೆಯವರಿಗೆ ಅವರ ಅದೇ ಹೊಲದಲ್ಲಿ ಎರವಲು ದುಡಿದು ತಿನ್ನುವ ಕಥಾವಸ್ತುವನ್ನು ಒಳಗೊಂಡಿದೆ. ತನ್ನ ಯೌವ್ವನದ ಭೋಗಕ್ಕಾಗಿ ಮಗನ ತಾರುಣ್ಯವನ್ನು ಪಡೆದು ನಮ್ಮೆಲ್ಲರ ಅಂತರಾಳದ

ಪ್ರತಿನಿಧಿಯಾಗುತ್ತಾಳೆ ಯಾಯತಿ. ಇದೇ ರೀತಿ ರವಿಯು ಒಲವಿನ ಭೋಗ ತನ್ನ ಹೆಂಡತಿ–ಮಕ್ಕಳನ್ನು ಮರೆಯುವ ಪ್ರಸಂಗವೇ 'ಕತ್ತಲ ನೆಲದ ಕಪ್ಪು ಕಥೆ' ಕಥೆಯಲ್ಲಿ ಹಿಂಸೆ, ಕ್ರೌರ್ಯ, ಸ್ವಾರ್ಥಪರತೆ ತುಂಬಿ ತುಳುಕುತ್ತದೆ. ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ ಎಂದು ದಾಸರು ಹೇಳುವಂತೆ ಈ ಕಥೆಯು ಸಿದ್ಲಿಂಗಣ್ಣನ ಜೀವ ದೊಡ್ಡದು ಕಾರ್ಯಕ್ಕಿಂತಲೂ, ಹಣಕ್ಕಿಂತಲೂ ಎನ್ನುವ ಚಿತ್ರಣವಿದೆ. ಕುಲ–ಕುಲವೆಂದು ಹೊಡೆದಾಡದಿರಿ ಕುಲದ ನೆಲವ ಬಲ್ಲಿರಾ ಎಂದು ಪೂರ್ವಿಕರು ಹೇಳಿದರೂ ಸಹ ಈ ಶತಮಾನದಲ್ಲಿ ಶಿಕ್ಷಿತರು ಜಾತಿ ವ್ಯಾಮೋಹದಿಂದ ಇನ್ನೋ ಹೊರಗಡೆ ಬಂದಿಲ್ಲ. ಜಾತಿಯ ದೊಡ್ಡಸ್ಥಿಕೆಯಿಂದ ಕೆಳಜಾತಿಯವರೆಗೆ ದೌರ್ಜನ್ಯಗಳು ತಪ್ಪಿಲ್ಲವೆಂಬುದು ಸತ್ಯವಾಗಿದೆ. ಆದರೂ ಕೆಳಜಾತಿಯವರು ತಮ್ಮ ಮೇಲಿನ ಶೋಷಣೆಯನ್ನು ಖಂಡಿಸುವ ಪ್ರಯತ್ನವನ್ನು ಮಾಡುವ ಸಂಗತಿಯನ್ನು ಈ ಕಥೆಯು ವಿರ್ಮಶಿಸುತ್ತದೆ.

'ಕಾಡು' ಕಥೆಯಲ್ಲಿ ನಿಗೂಢವಾದ ಸಾವು ಕಾಡಿನ ನಿಶಬ್ದದಂತೆಯೇ ನಿಶಬ್ಧವಾಗಿಯೇ ಉಳಿಯುತ್ತದೆ. ಸಾವಾದ ವ್ಯಕ್ತಿಗೆ ಮತ್ತು ಅವರ ಮನೆಯವರಿಗೆ ಮಾತ್ರ ಅನ್ಯಾಯವಾಗುತ್ತದೆಯೇ ಹೊರತು ಉಳಿದ ನರೆಲ್ಲರೂ ಅದರ ಬಗ್ಗೆ ಹೆಚ್ಚಿನ ಗಮನ ಕೊಡದಿರುವುದು. ಕಥೆ ಓದುವಾಗ ನಮ್ಮ ಅನುಭವಕ್ಕೆ ಬರುತ್ತದೆ. ಗಿಡ–ಮರಗಳನ್ನು ಕಡಿಯುವ ಕೊಡಲಿಯು ಕಥೆಯಲ್ಲಿ ಓರ್ವ ವ್ಯಕ್ತಿ ಯಲ್ಲಪ್ಪನನ್ನು ನಿಗೂಢವಾಗಿ ಆ ಕೊಡಲಿಯಿಂದ ಕಡಿದು ಕೊಲೆ ಮಾಡುತ್ತಾರೆ. ಇಲ್ಲಿ ಶೆಟ್ಟಿಗೆವ್ವ ಬರೆದಂತೆ ಜೀವನದಲ್ಲಿ ನಡೆಯುತ್ತದೆಂದು ಸಾವಿನ ಒಳಅರಿವನ್ನು ತಿಳಿಯದೇ ಕಾಡಿನ ಜನರು ಕೈಬಿಡುವ ಪ್ರಸಂಗವಿದೆ. ಸತ್ಯವೇ ಕಾಡಿನಂತೆಯೇ ಕಗಂಟ್ಟಾಗಿ ಉಳಿಯಿತು. ಕಾಡಿನಷ್ಟು ಮಹತ್ತರವಾದದ್ದು, ಸತ್ಯವೆಂಬ ಧೋರಣೆಯಿದೆ. ಕೆದಕದಿರು ಕೆದಕದಿರು ಹುರುಳಿಲ್ಲ ಎನ್ನುವಂತೆ ಸತ್ಯ ಕನ್ನಡಿಯೊಳಗಿನ ಗಂಟಾಗಿ ಪರಿಣಮಿಸುತ್ತದೆ. ಕಥೆಯು ಭಾವನಾವಶತೆಯು ಕಥೆಯ ಮುಗಿತಾಯಕ್ಕೆ ಕೃತಿಮವಾಗಿದೆ. 'ನಾಯಿಬಾಲ' ಕಥೆಯು ಮನುಷ್ಯನಿಗೆ ಸಹಜವಾಗಿ ಎಷ್ಟೇ ಕೊಟ್ಟರೂ ಸಹ ಅವನು ತನ್ನ ಮೊದಲಿನ ಅಭ್ಯಾಸ, ಚಟುವಟಿಕೆಯನ್ನು ಬಿಡುವುದಿಲ್ಲವೆಂಬ ನಿದರ್ಶನಕ್ಕೆ ಇದೊಂದು ಸ್ಪಷ್ಟತೆಯ ಕಥೆಯನ್ನು ನೋಡಬಹುದು. ಸಮಾಜವನ್ನು ಸುಧಾರಿಸಲು ಸಮಾಜದಲ್ಲಿರುವ ದೇವದಾಸಿ ಪದ್ಧತಿಯನ್ನು ನಿವಾರಿಸಲು ಡಾ.ದಯಾನಂದ ಮತ್ತು ವಿಜಯಕುಮಾರ ಮಾಡಿದ ಪ್ರಯತ್ನಗಳೆಲ್ಲವು ವಿಫಲವಾದವು.

'ಸ್ಯಾಡಿಸ್ಟ್' ಕಥೆಯು ನಾಯಿಬಾಲ ಕಥೆಯನ್ನೇ ಅನುಸರಿಸುತ್ತದೆ. ಪುರುಷಪ್ರಧಾನ ಸಮಾಜವು ಸ್ತ್ರೀಯರನ್ನು ಯಾವ ದೃಷ್ಟಿಕೋನದಲ್ಲಾದರೂ ತಿಳಿಸಬಹುದೆಂದು ತಾರ್ತಿಕ ನಿಲುವಿನಿಂದ ಕೊಡಿದೆ. ಬಿ.ಇ.ಪದವಿಧರನಾದರೂ ಉದ್ಯೋಗ ಸಿಗದೆ ಅದೇ ಕೋಪವನ್ನು ಅಮಾಯಾಕಳಾದ ಸುಮಿತ್ರಾಳ ಮೇಲೆ ಹಾಕುವುದನ್ನು ಇಡೀ ಕಥೆಯು ಚಿತ್ರೀಸುತ್ತದೆ. ಸ್ತ್ರೀಯು ಸ್ವಾವಲಂಬಿಯಾಗಿ ಪುರುಷ ಪ್ರಧಾನ ಸಮಾಜದಲ್ಲಿ ತಲೆ ಎತ್ತಿಕೊಂಡು ನಿಂತಾಗ ಮಾತ್ರ ಪುರುಷರ ಹಿಂಸೆ, ಶೋಷಣೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿದೆ ಎಂದು ದೃಢೀಸಿದ್ದಾರೆ. ಕೊಡಗಿನ ಗೌರಮ್ಮ ಬರೆದ 'ವಾಣಿಯ ಸಮಸ್ಯೆ' ಕಥೆಯಲ್ಲಿ ಇಂದಿರೆ ಗಂಡನನ್ನು ಕಳೆದುಕೊಂಡು ಸಮಾಜದ ಹೀನ ದೃಷ್ಟಿಗೆ ಬಲಿಯಾದರೆ ಈ ಕಥೆಯಲ್ಲಿ ಬರುವ ಸುಮಿತ್ರಾಳ ಗಂಡನ ಹಿಂಸೆಗೆ, ಶೋಷಣೆಗೆ ವಿದ್ಯಾವಂತಳಾದರೂ ಪ್ರತಿಭಟಿಸುವ ಮನೋಭಾವವಿಲ್ಲದೆ ಬಲಿಯಾಗುತ್ತಾಳೆ.

ಪುರಂದರದಾಸರು ಹೇಳುವ ಹಾಗೆ "ಜಾಲಿಯ ಮರದಂತೆ ದುರ್ಜನರು ಧರೆಯೊಳಗೆ" ಎಂಬಂತೆ ಈ ಕಥೆಯು ನಿದರ್ಶನವಾಗಿದೆ. ತನ್ನವರನ್ನು ಕಳೆದುಕೊಂಡು ಮುಗ್ಧ ಹುಡುಗಿ ನೀಲಾಗಂಗಳಾ ಅಸಹಾಯಕತೆಯನ್ನು ಈ ಕಥೆಯು ನಿರೂಪಿಸುತ್ತದೆ.

**ರಾಜಕೀಯ ಪ್ರಭುತ್ವದ ಮನೋಧೋರಣೆ**

'ಈ ಭೂಮಿ ಯಾರದು' ಕಥೆಯಲ್ಲಿ ಬುದಣ್ಣ ಸಾಹುಕಾರ ಪಾತ್ರವು ಊರಿನ ನಿರುದ್ಯೋಗ ಯುವಕರನ್ನು ಕಟ್ಟಿಕೊಂಡು ರಾಜಕೀಯ ಮಾಡುವ ಪ್ರಸಂಗವನ್ನು ಸಾದರಪಡಿಸುತ್ತದೆ. ಭೂಮಿ ತಾಯಿಯನ್ನು ಮಾರುವಂತೆ ಮಾಡಿ ಕುಲಕರ್ಣಿ ಮತ್ತು ಬುದಣ್ಣ ಸಾಹುಕಾರ ಊರಿನ ಜನರಿಗೆಲ್ಲಾ ರಾಜಕೀಯಾಟದಲ್ಲಿ ಮುಳುಗಿಸಿ ತಾವು ಅದರ ಲಾಭವನ್ನು ಪಡೆಯುವ ಒಟ್ಟು ಆಶಯವನ್ನು ಕಥೆಯು ಒಳಗೊಂಡಿದೆ. ವೀರಸ್ವಾಮಿಯು ಊರಿನ ಎಲ್ಲ ಭೂಮಿಯನ್ನು ತಾನೇ ಕಬಳಿಸುವ ಪ್ರಯತ್ನದಲ್ಲಿ ರಾಜಕೀಯ ತಂತ್ರವನ್ನು ಬಳಸುವ ಕಥಾವಸ್ತುವನ್ನೊಳಗೊಂಡಿದೆ.

'ಹೊಸದಿಕ್ಕಿನೆಡೆಗೆ' ಕಥೆಯು ಧಾರ್ಮಿಕದಿಂದ ರಾಜಕೀಯ ತಂತ್ರದೆಡೆಗೆ ಸಾಗುತ್ತದೆ. ಕಥೆಯಲಿ ಬರುವ ಪುಂಡ ಯುವಕರಿಂದ ಪ್ರಾರಂಭಗೊಂಡು ಅವರ ಕ್ಷಮಾಪಣೆ ಕೇಳುವ ಮೂಲಕ ಮುಕ್ತಾಯದ ತಿರುಳನ್ನು ಪಡೆಯುತ್ತದೆ. 'ಕತ್ತಲ ನೆಲದ ಕಪ್ಪು ಕಥೆ'ಯ ಮೂಲಕ ಜನರಿಗೆ ನ್ಯಾಯಬದ್ಧವಾಗಿ ಸಿಗಬೇಕಾದುದರ ಬಗ್ಗೆ ಮಲ್ಲಪ್ಪ ಸರಪಂಚಗೆ ಪ್ರಶ್ನಿಸುತ್ತಾನೆ. ಸುಮ್ನೆ ದೊಡ್ಡೋರ ತಂಟೆಗೆ ಹೋಗಬಾರದು ಮಗ ಅಂತ ಬುದ್ಧಿ ಹೇಳಿದ್ದರು. ಸಿದ್ಲಿಂಗನ ವೈಚಾರಿಕ ಪ್ರಜ್ಞೆಯು ಮಲ್ಲಪ್ಪನ ಕೆಟ್ಟಕೆಲಸ, ಅನ್ಯಾಯ, ಹೊರಸೂಸುವ ಸಂಗತಿಯನ್ನು ಕಥೆಯು ಅತ್ಯಂತ ಸ್ತುತ್ಯಾರ್ಹವಾದವಾಗಿದೆ. ಸಿದ್ಲಿಂಗನ ಪ್ರಜ್ಞೆಯು ರಾಜಕೀಯದ ಎಳೆಎಳೆಯನ್ನು ಬಿಚ್ಚಿ ತೋರಿಸುತ್ತದೆ. 'ಕಾಡು' ಕಥೆಯಲ್ಲಿ ಚೂಲತಿನ್ಯಾಗ ದುಡ್ಕಂಡು ತಿಂದು ಜೀವನ ಸಾಗಿಸುತ್ತಿದ್ದ ಯಲ್ಲಪ್ಪನ ನಿಗೂಢ ಸಾವಿನ ಕಥೆಯ ಹಿಂದೆ ರಾಜಕೀಯ ಕೈವಾಡವಿರುವುದನ್ನು ಕಥೆಯು ಚಿತ್ರಿಸುತ್ತದೆ. ಪ್ರಜ್ಞಾಹೀನರಾಗಿ ಜನಗಳು ಸಾವಿನ ಬಗ್ಗೆ ಯೋಚಿಸಿದೆ ಕೈಬಿಡುತ್ತಾರೆ. ಕಥೆಯಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಮಾತ್ರ ರಾಜಕೀಯ ತ ಂತ್ರ ಅಡಗಿರುವುದು ಬೆಳಕಿಗೆ ಬರುತ್ತದೆ.

'ಮತದಾನ' ಕಥೆಯು ಮೂಲಕ ರಾಜಕೀಯ ಮೇಲ್ಮಟ್ಟದ ವ್ಯಕ್ತಿಗಳು ಮಾಡುವ ಊಸರವಳ್ಳಿ ಆಟವನ್ನು ನಿರೂಪಿಸುತ್ತದೆ. ಜನರ ಮತದಲ್ಲಿ ತಮ್ಮ ಬೆಳೆ ಕಾಳನ್ನು ಬೇಯಿಸಿಕೊಳ್ಳುವ ಸಲುವಾಗಿ ಕಥೆಯಲ್ಲಿ ಬರುವ ಪಿಲ್ಲಣ್ಣ, ಮಲ್ಲಪ್ಪ ಪಾತ್ರಗಳು ಮಾಡುವ ವಿಡಂಬನೆಯನ್ನು ಸಮರ್ಥವಾಗಿ ಹೇಳಿದ್ದಾರೆ. ಒಂದು ಕಡೆ ಯಂಕಪ್ಪ ಎಲೆಕ್ಷನ್‌ಗೆ ನಿಂತು ಕೂಲಿ ಮಾಡಿಕೊಂಡು ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಾ ಇದಾನೆ. ಬೇಕಾದ್ರ ಜನ ಓಟ ಹಾಕಿ ಆರ್‍ಸಿತರ್‍ಲಿ ನನ್ನ ಕೈಲಾದ ಕೆಲಸ ಮಾಡುಸ್ತೀನಿ ಬಿಟ್ಟರ ಬಿಡ್ಲಿ ಸೋತ್ರು–ಗೆದ್ರು ನನಗೇನ್ ಫರಕ್ ಬೀಳೋದಿಲ್ಲ ಎಂದು ತನ್ನ ಕೆಲಸದಲ್ಲಿ ನಿರತನಾಗುವ ಪ್ರಾಮಾಣಿಕತೆಯ ಒಟ್ಟು ಆಶಯವನ್ನೊಳಗೊಂಡಿದೆ. ಕಥೆಗಾರರು ವಿಭಿನ್ನ ರೀತಿಯ ಭಾಷಾ ತಂತ್ರಗಾರಿಕೆಯ ಮೂಲಕ ಹಳ್ಳಿ ಸೊಬಗನ್ನು ಹಳ್ಳಿ ಭಾಷೆಯನ್ನು ಬಳಸಿಕೊಂಡಿದ್ದಾರೆ. ರಾಜಕೀಯ ತಂತ್ರವನ್ನು ಕಥೆಯಲ್ಲಿ ಬಳಸಿದ್ದಾರೆ.

'ಬ್ರೋಕರ್' ಕಥೆಯು ಶಿಕ್ಷಣವನ್ನು ಪಡೆದು ರಾಜಕೀಯದಲ್ಲಿ ನುಗ್ಗಿ ಅದರಲ್ಲಿಯೇ ತೋಳಲಾಡಿ ಮೋಸಮಾಡುವ ಪ್ರಭುತ್ವವನ್ನು ತೋರ್ಪಡಿಸಿ, ಕಾಮ ಪ್ರವೃತ್ತಿಯನ್ನು ಹೆಚ್ಚಿಸಿಕೊಂಡನು. ಸ್ತ್ರೀ ಲೋಭಿಯಾಗಿ

ಕಾಣಿಸಿಕೊಂಡನು ಬಸವರಾಜ. ಇವನನ್ನು ಸತೀಶ ಒಂದು ಸ್ತ್ರೀಯನ್ನು ಕರೆದುಕೊಂಡು ಬರುತ್ತೇನೆ ಹಣಕೂಡು ಎಂದು ಒಪ್ಪಿಸಿದ ಮೇಲೆ ಬಸವರಾಜ ಆನಂದವಾಗಿ ತನ್ನ ಕಾಮುಕತೆಯನ್ನು ರಮೇಶ ರಾಜಕೀಯ ನಾಟಕೀಯತೆಯನ್ನು ತೋರಿಸುತ್ತಾನೆ.

'ಕಥೆ ಹೇಳು ಗೆಳೆಯಾ' ಕಥೆಯಲ್ಲಿ ರಾಜಕೀಯ ಪ್ರಭಾವವಿರುವುದರಿಂದಲೇ ಮಲ್ಲನಗೌಡನು ತಾನು ನಡೆಸಿದ್ದೆ ದರ್ಬಾರ ಎಂದು ತಿಳಿದು ಒಂದು ಶಿಕ್ಷಣ ಸಂಸ್ಥೆಯನ್ನು ತೆಗೆದು ಅಲ್ಲಿಗೆ ಉಪನ್ಯಾಸಕಿಯರನ್ನು ನೇಮಿಸಿ ರಾಜಕೀಯ ಬಲದಿಂದ ಅವರನ್ನು ಬಳಸಿಕೊಂಡನು. ತನ್ನನ್ನು ಕಾಣಲು ಬರುವ ಮಂತ್ರಿಗಳಿಗೆ, ಶಾಸಕರಿಗೆ ಸಹ ಔತಣವಾಗಬೇಕಿತ್ತು. ತನ್ನ ಮಲ ತಂಗಿಯ ಆಸ್ತಿಯನ್ನು ಕಬಳಿಸಲು ಕುಟೀಲ ತಂತ್ರವನ್ನು ಪ್ರಯೋಗಿಸಿ ಆಸ್ತಿಯನ್ನು ಪಡೆದು ಅವಳನ್ನು ಕೊಂದು ಆನಂದನ ಮೇಲೆ ಹಾಕಿದನು. ಹೀಗೆ ಹಿಂಸೆ, ಅತ್ಯಚಾರ, ಕೊಲೆ, ಮೋಸ, ದರೋಡೆ, ಸ್ತ್ರೀಯರನ್ನು ಉಪಯೋಗಿಸಿಕೊಳ್ಳುವುದುನ್ನು ಕಥೆಯಲ್ಲಿ ಚಿತ್ರಿಸಿದ್ದಾರೆ. ನಾವು ಭಾರತಾಂಬೆಯನ್ನು ದೇವತೆಯೆಂದು ಪೂಜಿಸುವುದಾದರೆ ಕಥೆಯಲ್ಲಿ ನೈಜ್ಯ ಬದುಕಿನಲ್ಲಿ ಸ್ತ್ರೀಯರನ್ನು ದೇವತೆಗಳೆಂದು ಏಕೆ ಕಾಣಲಾರರು ಹೇಯವಾಗಿ, ಭೋಗದ ವಸ್ತುವಾಗಿ ಮಾತ್ರ ಪರಿಗಣಿಸುವುದು. ರಾಜಕೀಯ ತಂತ್ರವು ಸಾಧಾರಣ ಮನುಷ್ಯನನ್ನು ಕ್ರೂರರನ್ನಾಗಿ ಮಾಡುತ್ತದೆಂಬುದನ್ನು ನಿರೂಪಿಸಿದ್ದಾರೆ.

**ಧಾರ್ಮಿಕ ಪ್ರಭುತ್ವದ ಮನೋಧೋರಣೆ**

'ಒಂದು ಅಪೂರ್ಣ ಕಥೆ' ಕಥೆಯಲ್ಲಿ ಜಾತೀಯತೆ, ಧಾರ್ಮಿಕತೆಯನ್ನು ಹೇಳುತ್ತಾ, 'ಕತ್ತಲ ನೆಲದ ಕಪ್ಪು ಕಥೆ' ಯತ್ತ ಸಾಗುತ್ತದೆ. ಹನ್ನರೆಡನೇ ಶತಮಾನದಲ್ಲಿ ಶರಣರು ಜಾತಿಯನ್ನು ಕುರಿತು ಹೇಳಿದರು. ಕನಕದಾಸರು 'ಕುಲ–ಕುಲವೆಂದು ಹೊಡೆದಾಡದಿರಿ ಕುಲದ ನೆಲವೆನಾದರೂ ಬಲ್ಲಿರಾ' ಎಂದು ಪ್ರಶ್ನಿಸಿದರು. ನಮ್ಮಲ್ಲಿ ಧಾರ್ಮಿಕ ಜಾತೀಯ ಮೂಢನಂಬಿಕೆಗಳು ನಶ್ವರವಾಗದೆ ಶಾಶ್ವತದತ್ತ ವಾಲುತ್ತಿದೆ. ಮೇಲ್ಜಾತಿಯವನಾದ ಮಲ್ಲಪ್ಪನು ದಲಿತ ಜಾತಿಗೆ ಸೇರಿದ ಸಿದ್ಲಿಂಗನನ್ನು ಚಂಜಿಮುಂದ ಊರ ಹಣಮುಂದೇವರ ಗುಡಿ ಮುಂದ ಸರಪಂಚ ಬೆಂಕಿ ಹಚ್ಚಿ ಸುಡುಸ್ತಾನಂತ ಡಂಗೂರವನ್ನು ಬಾರಿಸುವ ಕಥೆಯನ್ನೊಳಗೊಂಡಿದೆ. ಜಾತಿಯ ಹೆಸರಿನಲ್ಲಿ ಅನಾದಿ ಕಾಲದಿಂದಲೂ ಶೋಷಣೆಗೆ ಒಳಗಾದ ಕೆಳಜಾತಿಯ ಮನುಷ್ಯರು ಮಾದರಿಯಾಗಿ ಕಥೆಯಲ್ಲಿ ಉಳಿಯುತ್ತಾರೆ. ಧಾರ್ಮಿಕ ಅವಿವೇಕತನ ಮನುಷ್ಯ–ಮನುಷ್ಯರಲ್ಲಿಯೇ ರಾಗ–ದ್ವೇಷಗಳ ಗಹನತೆಯು ಕಣ್ಣಿಗೆ ಕಟ್ಟಿ ದಿಗಿಲುಗೊಳ್ಳವಂತಾಗುತ್ತದೆ. ಕ್ರೀಯಾಶೀಲವಾದ ಅವಿವೇಕದ ದುರಂತವು ಕೊನೆಯಲ್ಲಿ ಮೇಲ್ಜಾತಿಯವರಿಂದ ಕೆಳಜಾತಿಯವರ ಸಾವಿನ ಪರಿಣಾಮದಿಂದ ಮುಕ್ತಾಯವಾಗುತ್ತದೆ.

'ಮತ್ತೆ ಮಳೆ ಹೊಯ್ಯುತ್ತಿದೆ: ಭೂಮಿ ಕರೆಯುತ್ತಿದೆ' ಕಥೆಯ ಮೂಲಕ ವೈಚಾರಿಕ ಪ್ರಜ್ಞೆಯು ಮೂಡಿದೆ. ಶಿಕ್ಷಿತರು ಜಾತೀಯತೆ, ಧಾರ್ಮಿಕತೆಯನ್ನು ಮೂಢರಂತೆ ವರ್ತಿಸುತ್ತಿದ್ದಾರೆ. ವಿವೇಕಿಗಳಾಗಿ ಅವಿವೇಕದ ಸಂಪ್ರದಾಯವನ್ನು ಆಚಾರಿಸುವುದನ್ನು ನಿರೂಪಿಸುತ್ತದೆ. ಸನ್ಯಾಸಿಯಾಗಿ ಮಠವನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಒಳಿತನನ್ನು ಕಾಣದೆ ಸಂಸಾರಿಯಾಗಿ ಜೈಸಬೇಕೆಂದು ಮಠವನ್ನು ತ್ಯಜಿಸಿ ಬರುವ ನೂರಂದಯ್ಯನು ಜೀವನದ ತಿರುವನ್ನು ಕಥೆಯು ಹೇಳುತ್ತಾ ಹೋಗುತ್ತದೆ. ಮಠಗಳಲ್ಲಿ

ದೈವಾಂಶವುಂಟು, ಸತ್ಯವುಂಟು ಎಂದು ಜನರು ಮಠಗಳಿಗೆ ಜನ ಮರಳೂ ಜಾತ್ರೆ ಮರಳೂ ಎಂಬಂತೆ ಜನರು ಮಠಗಳಿಗೆ ದೌಡಾಯಿಸುತ್ತಾರೆ. ಧಾರ್ಮಿಕ ನೈತಿಕತೆಯನ್ನು ನಿರೂಪಿಸುತ್ತದೆ.

'ಕಾಡು' ಕಥೆಯು ಒಂದು ನಿಗೂಢವಾದ ಸತ್ಯದೊಂದಿಗೆ ಪ್ರಾರಂಭವಾಗಿ ಧಾರ್ಮಿಕ ಮುಖಂಡನ ನಿರ್ಧಾರದ ಮಾತಿಗೆ ಕೊನೆಗೊಳ್ಳುತ್ತದೆ. ಶುದ್ಧ ಮೂಢನಂಬಿಕೆಯಿಂದ ಬದುಕುವ ಜನಸಮುದಾಯವು ಈ ಕಥೆಯಲ್ಲಿದ್ದಾರೆ. ಶೆಟಿಗೆವ್ವಾ ಬರೆದದ್ದು ಜೀವನದಲ್ಲಿ ಆಗುತ್ತದೆಂದು ನಂಬಿಕೆಗೆ ಜೋತು ಬಿದ್ದು ಬದುಕುವ ವರ್ಗದವರ ಅಪ್ಪ ಹಾಕಿದ ಹಾಲದ ಮರಕ್ಕೆ ಮಗ ಜೋತು ಬಿದ್ದಂತೆ ಹಿಂದಿನವರ ಸಂಪ್ರದಾಯವನ್ನು ಅನುಸರಿಸಿಕೊಂಡು ಈ ಮಾತಿನಂತೆಯೇ ಜೋತುಬಿದ್ದಿದ್ದಾರೆ. 'ನಾಯಿಬಾಲ' ಕಥೆಯ ಮೂಲಕ ದೇವದಾಸಿಯರಿಗೆ ಆಚಾರಣೆ ತಪ್ಪೆಂದು ಮನವರಿಕೆ ಮಾಡಿ ಹೇಳಿದರೂ ಸಹ ಅವರು ದೇವರ ಹೆಸರಿನಲ್ಲಿ ತಮ್ಮನ್ನು ತಾವೂ ಶೋಷಿಸಿಕೊಳ್ಳುವ ವಸ್ತುವನ್ನು ಕಥೆಯು ಹೊಂದಿದೆ. ನಾಯಿಬಾಲದಂತೆ ಸಮಾಜದ ವ್ಯವಸ್ಥೆಯೇ ಡೊಂಕು ಡೊಂಕಾಗಿರುವುದನ್ನು ವಿಷಾದಿಸುತ್ತದೆ. ಧಾರ್ಮಿಕ ಆಚಾರಣೆಗಳು, ನಂಬಿಕೆಗಳು ಹೇಗೆ ನಾಶವಾಗದ ಬೇರುಗಳಂತಯೆ ತಮ್ಮ ಸ್ಥಿರತೆಯನ್ನು ಹೊಂದಿವೆ ಎನ್ನುವುದು.

'ಒಂದು ಹಾವಿನ ಸುತ್ತ' ಕಥೆಯಲ್ಲಿ ಜನರು ನೈಜ್ಯತೆಯನ್ನು ಮರೆತು ದೇವರು, ಶರಣ, ಹಾವು, ಮಠ–ಮಠಾಧೀಶರ ಮಾತುಗಳನ್ನು ಕೇಳಿ ಚಾಚು ತಪ್ಪದೆ ಪಾಲಿಸುತ್ತಾರೆ. ಸಮಾಧಿ ಮೇಲೆ ಬಂದು ಮಲಗಿದ ಹಾವಿಗೆ ಸತ್ಯಯಿದ್ದರ ನನಗ ಮಕ್ಕಳರ ಕೊಡಲಿ ಅಂತ ಬೇಡಿಕೊಂಡು ಧೈರ್ಯಮಾಡಿ ಮಡಿ ಬಟ್ಟಲಲ್ಲಿ ಹಾಲು ಇಟ್ಟು ದೀಪ ಮೂಡಿಸಿದಳು. ಸಮಾಧಿಯಲ್ಲಿನ ಹಾವಿಗೆ ಪೂಜೆ, ಟೆಂಗೂ–ಹೂವಿನ, ಹಾಲಿನ ನೈವೇದ್ಯ ಇತ್ಯಾದಿಗಳನ್ನು ನೀಡುತ್ತಿದ್ದರು. ಧಾರ್ಮಿಕ ನಂಬಿಕೆ ಅವರಲ್ಲಿ ದೃಢವಾಗಿತ್ತೆಂಬುವುದು ಕಥೆಯ ಆಶಯವಾಗಿದೆ. 'ಪ್ರಯೋಗ' ಕಥೆಯು ಮನುಷ್ಯರು ತಮ್ಮ ಶಕ್ತಿಯ ಮೇಲೆ ಬಾರ ಹಾಕಿ ದುಡಿದು ತಿನ್ನುವ ಅಲೆಮಾರಿ ಜನಾಂಗದವರಿಗೆ ಯಾವ ದೇವರುಂಟು? ಯಾವ ದೈವಕ್ಕೆ ಅವರು ಶರಣಾಗುತ್ತಾರೆ ಎಂಬಿತ್ಯಾದಿ ಪ್ರಶ್ನೆಗಳು ಒಡಲಲ್ಲಿ ಮೂಡಿದರೂ ಉತ್ತರ ಸಿಗುವುದಿಲ್ಲ. ಅವರು ತಾವೂ ಮಾಡುವ ಕಾಯಕದಲ್ಲಿ ದೇವರನ್ನು ಅನ್ಯಮನಸ್ಕರಾಗದೆ 'ಕಾಯಕವೇ ಕೈಲಾಸ' ಎಂಬ ಉಕ್ತಿಯನ್ನು ತಮ್ಮ ಕಾಯಕದಲ್ಲಿ ಸ್ವರ್ಗವನ್ನು ಕಾಣುವಂತರಾಗಿದ್ದಾರೆ. 'ಆಚಾರವೇ ಸ್ವರ್ಗ ಅನಾಚರವೆ ನರಕ' ಎಂಬಂತೆ ಆಚಾರವಂತಾರಾಗಿ ಸದ್ಗುಣ ಸಂಪನ್ನರಾಗಿರುವುದುಕ್ಕೆ ದೇವರೇ ಅವರನ್ನು ಮೆಚ್ಚಿ ಆರೋಗ್ಯವಂತರನ್ನಾಗಿ ಇಟ್ಟಿದ್ದಾನೆಯೇ?. ಪ್ರಶ್ನೆಯ ಮುಖೇನ ಕಥೆಯು ಚರ್ಚಿತವಾಗಿದೆ. 'ಬಲಿ' ಕಥೆಯಲ್ಲಿ ಊರಿಗೆ ಊರೇ ಭೀಮಪ್ಪಗೌಡನನ್ನು ಒಳ್ಳೆಯ ಆಚಾರವಂತವನೆಂದು ನಂಬಿಕೊಂಡಿದ್ದಾರೆ. ಗೊರುರುರವರ ಕಥೆ 'ಆಚಾರ ಕೆಟ್ಟರೂ ಆಕಾರ ಕೆಡಬಾರದು' ಅನ್ನುವ ಹಾಗೆ ಧರ್ಮದಳ್ಳಿ ಭೀಮಪ್ಪಗೌಡನ ವ್ಯಕ್ತಿತ್ವವನ್ನು ಗುರುತಿಸಬಹುದು. ಅವನ ಆಕಾರ ಮನಸ್ಸಿನ ವಿಕಾರಗಳನ್ನು ತಿಮ್ಮ ಮಾತ್ರ ಬಲ್ಲವನಾಗಿದ್ದಾನೆ. ಇತ್ತ ಭೀಮಪ್ಪಗೌಡನು ತನ್ನ ಬಲಿಯನ್ನು ಬೇಟೆಯಾಡಲು ಸಿದ್ಧನಾಗುತ್ತಾನೆಂದು ಕಥೆಯಲ್ಲಿ ಕೌತುಕವಾಗಿ ನೆಲೆಸಿ ಬಿಟ್ಟಿತ್ತು. ಊರಿನ ದೇವಿ ಉತ್ಸವವನ್ನು ಮಾಡುವ ನಿರ್ಧಾರ ತೆಗೆದುಕೊಂಡ ಮೇಲೆ ಊರಿಗೆ ಊರೇ ಹರಕಿ ಹೊತ್ಕಂಡೋರು ಕುರಿ, ಕೋಣ, ಕೋಳಿ ತಂದು ದೇವತಿಗೆ ಬಲಿ ಕೊಟ್ಟು ಹರಕಿ ಮುಟ್ಟಿಸಿ ಪುಣ್ಯ ಕಟ್ಟಿಗ್ಯಂತಿದ್ರು. ಆ ತಾಯಿ ಹೊಟ್ಟೆ ತಣ್ಣಗಿದ್ರೆ ಊರನ್ನೂ ತಣ್ಣಗಿಟ್ಟಾಳು ಎಂಬ ನಂಬಿಕೆಯಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಕಥನ ಸಾಹಿತ್ಯಕ್ಕೆ ಇವರ ಕೊಡುಗೆ ಅನನ್ಯವಾದುದು. ಸಾಮಾಜಿಕ ನ್ಯಾಯ, ಆರ್ಥಿಕ ಸಂಕಷ್ಟ, ಶೈಕ್ಷಣಿಕ ಸಮಸ್ಯೆಗಳು, ರಾಜಕೀಯ ಬದ್ಧತೆ, ಜಾತೀಯತೆ ನಿರ್ಮೂಲನೆ, ಬಂಡಾವಳಿಶಾಹಿ ಧೋರಣೆ, ನೈತಿಕತೆ, ಮೂಢನಂಬಿಕೆಯ ವಿರೋಧದ ಧೋರಣೆಗಳು ಹೀಗೆ ವಿವಿಧ ನೆಲೆಯಲ್ಲಿ ವೈಶಿಷ್ಟ್ಯತೆಯನ್ನು ಕಥೆಗಳಲ್ಲಿ ಸಾದರಪಡಿಸಿದ್ದಾರೆ. ಒಂದೊಂದು ಕಥೆಯಲ್ಲಿಯೂ ಒಂದೊಂದು ಆಶಯವು ಅನುಭವಗಳಿಗೆ ಪ್ರತಿಸ್ಪಂದಿಸಿಕೊಂಡಿದೆ. ಕಥೆಗಳಲ್ಲಿನ ಭಾಷಾ–ಶೈಲಿ, ಆಳ–ಅರಿವಿನ ಸೂಕ್ಷ್ಮತೆಯ ನೋಟವನ್ನು ಕಾಣಬಹುದು.

**ಆಕರ ಗ್ರಂಥ**

- ಸಿದ್ಧರಾಮ ಹೊನ್ಕಲ್. ನೆಲದ ಮರೆಯ ನಿಧಾನ. ಶ್ರೀ ಅಲ್ಲಮಪ್ರಭು ಪ್ರಕಾಶನ, ಲಕ್ಷ್ಮೀನಗರ ಅಂಚೆ, ಶಹಾಪುರ, ಕಲಬುರುಗಿ ಜಿಲ್ಲೆ.
- ಸಿದ್ಧರಾಮ ಹೊನ್ಕಲ್‌ರವರ ವಿವಿಧ ಕಥೆಗಳು.

**ಪರಾಮರ್ಶನ ಗ್ರಂಥಗಳು**


- ಕೀರ್ತಿನಾಥ ಕುರ್ತಕೋಟಿ. (2012). ಬೇಂದ್ರೆ ಕಾವ್ಯವಿಮರ್ಶೆ–ಸಂಪುಟ–4. ಮೆ॥ಮಯೂರ ಪ್ರಿಂಟ್ ಆಡ್ಸ್. ಬೆಂಗಳೂರು.
- ಗಿರಡ್ಡಿಗೋವಿಂದರಾಜ. (2012). ಸಮಗ್ರ ವಿಮರ್ಶೆ–ಸಂಪುಟ–3. ಸ್ವಪ್ನಬುಕ್ ಹೌಸ್. ಬೆಂಗಳೂರು.
- ಪೂರ್ಣಚಂದ್ರ ತೇಜಸ್ವಿ. (2010). ವಿಮರ್ಶೆಯ ವಿಮರ್ಶೆ. ಪುಸ್ತಕ ಪ್ರಕಾಶನ. ಸರಸ್ವತಿಪುರಂ, ಮೈಸೂರು.
- ವಿಜಯ ಶ್ರೀ ಸಬರದ. (2013). ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ–ಸಂಪುಟ-2. ಪ್ರಸಾರಾಂಗ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ.